- ತೆಳ್ಳಗಿರುವವರು ಪೋಚಂಪಲ್ಲಿ ಕಾಟನ್, ಪಾಲಿ ಕಾಟನ್ ಆಯ್ಕೆ ಮಾಡಿಕೊಳ್ಳಿ.
- ಬೆಂಗಾಲಿ ಕಾಟನ್, ಕೋಟಾ ಕಾಟನ್, ಸಂಬಾಲ್‌ಪುರಿ, ಚಂದೇರಿ ಕಾಟನ್ ಸೀರೆಗಳು ಪಾರ್ಟಿವೇರ್‌ಗೆ ಚಂದ.
- ತಿಳಿಬಣ್ಣದ ಸೀರೆ ಡಿವೈನ್ ಲುಕ್ ಕೊಡುತ್ತದೆ.
- ಚಿಕ್ಕ ವಯಸ್ಸಿನವರು ಪುಟ್ಟ ಪುಟ್ಟ ಹೂವುಗಳಿರುವ ಸಣ್ಣ ಬಾರ್ಡರ್ ಇರುವ ಕಡುಬಣ್ಣದ ಸೀರೆ ಆರಿಸಿಕೊಳ್ಳಬಹುದು.
- ಅದ್ದೂರಿ ಮದುವೆ ಅಥವಾ ಗ್ರ್ಯಾಂಡ್ ಪಾರ್ಟಿಗೆ ಹೋಗುವಾಗ ಭಾರವಾದ ರೇಷ್ಮೆಸೀರೆ ಉಡುವ ಬದಲಿಗೆ ಹಗುರವಾದ ಕಾಟನ್ ಸಿಲ್ಕ್ ಸೀರೆ ಉಟ್ಟುಕೊಳ್ಳುವುದು ಸೂಕ್ತ.





ಸಮಾರಂಭಗಳಿಗಾಗಿಯೇ ರೇಷ್ಮೆ ಸೀರೆಯನ್ನೂ ಮೀರಿಸುವ ಸಖತ್ ಲುಕ್ ಕೊಡುವ ಕಾಟನ್ ಸಿಲ್ಕ್ ಸೀರೆ ಹೆಂಗಳೆಯರ ಮನತಣಿಸುತ್ತಿದೆ.

## ಕಾಟನ್‌ನಲ್ಲೂ ಅದೆಷ್ಟು ವೈವಿಧ್ಯ!

ಸಿಂಪಲ್ ಕಾಟನ್ ಸೀರೆಯಿಂದ ಹಿಡಿದು ಸಿಲ್ಕ್ ಕಾಟನ್ ಸೀರೆಯವರೆಗೆ ಸೀರೆಯಲ್ಲಿ ಎಷ್ಟೊಂದು ವೈವಿಧ್ಯ. ಕಾಟನ್ ಸೀರೆಗಳಲ್ಲಿ ಬೆಂಗಾಲಿ ಕಾಟನ್, ಕೋಲ್ಕತ್ತ ಕಾಟನ್, ಖಾದಿ ಸೀರೆ, ಧಾರವಾಡ ಕಾಟನ್, ಕೋಟಾ, ಜಮದಾನಿ ಕಾಟನ್, ಬೊಮ್ಕಾಯ್, ಪೋಚಂಪಲ್ಲಿ , ಸಂಬಾಲ್‌ಪುರಿ, ಪಾಲಿ ಕಾಟನ್, ಚಂದೇರಿ ಕಾಟನ್.... ಹೀಗೆ ಹತ್ತಾರು ವೈವಿಧ್ಯ, ಬಗೆಯವು ಲಭ್ಯ. ಆಕರ್ಷಕ ಬಣ್ಣ, ಬಾರ್ಡರ್, ವಿನ್ಯಾಸಗಳಿಂದ ಕಾಟನ್ ಸೀರೆಗಳು ಮಹಿಳೆಯರ ಮೆಚ್ಚು ಆಗಿದೆ.

## ಹದಿಹರೆಯದ ಹುಡುಗಿಯರಿಗೂ....

ಕಾಟನ್ ಸೀರೆ ಇದೀಗ ಫ್ಯಾಷನ್ ಟ್ರೆಂಡ್ ಸೃಷ್ಟಿಸಿದೆ. ಆಧುನಿಕ ಮನೋಭಾವದ ಯುವತಿಯರು, ಕಾಲೇಜು ಹುಡುಗಿಯರು, ಅಧ್ಯಾಪಕಿಯರು, ಸೆಲೆಬ್ರಿಟಿಗಳು ಕಾಟನ್ ಸೀರೆಗೆ ಮಾರುಹೋಗಿದ್ದಾರೆ. ಕಾಟನ್ ಸೀರೆಯಲ್ಲೂ ಹಲವು ವೈವಿಧ್ಯಮಯ ವಿನ್ಯಾಸದವು ಲಭ್ಯ. ಎಂಬ್ರಾಯಿಡರಿ ಮಾಡಿದ ರವಿಕೆಗಳು ಕೂಡ ಕಾಟನ್ ಸೀರೆಯ ಅಂದ ಹೆಚ್ಚಿಸುತ್ತದೆ.

ಕಾಟನ್ ಸೀರೆ ಎಂದರೆ ಅದು ಹಿರಿಯರಿಗಷ್ಟೆ ಸೀಮಿತ ಎಂಬ ಅಭಿಪ್ರಾಯ ಹಿಂದೆ ಇತ್ತು. ಆದರೆ ಈಗ ಈ ಅಭಿಪ್ರಾಯ ಬದಲಾಗಿದೆ. ಹದಿಹರೆಯದ ಹುಡುಗಿಯರಲ್ಲೂ ಕಾಟನ್ ಸೀರೆ ಅಭಿರುಚಿ ಹೆಚ್ಚಿಸಿದೆ. ಕಾಟನ್ ಕುರ್ತಾ, ಸೀರೆಗಳು, ಲಂಗ ದಾವಣಿ, ಸಲ್ವಾರ್‌ಗಳು ಫ್ಯಾಷನ್‌ಪ್ರಿಯರ ಮನತಣಿಸುತ್ತಿದೆ.

ಹೊನ್ನಿನ ಹೊಳಪಿನ ಕಡುಬಣ್ಣದ ರೇಷ್ಮೆಸೀರೆ ಕಂಡರೆ ಎಂಥ ಹೆಣ್ಣು ಕೂಡ ಮರುಳಾಗದೇ ಇರಳು. ಈಗ ಅಪ್ಪಟ ರೇಷ್ಮೆಯನ್ನೇ ಹೋಲುವ ಆದರೆ ಅತ್ಯಂತ ಹಗುರವಾದ, ಉಡಲು ಹಿತಕರವಾದ ಕಾಟನ್ ಸಿಲ್ಕ್ ಸೀರೆಗಳು ರೇಷ್ಮೆ ಸೀರೆಗೆ ಪ್ರತಿಸ್ಪರ್ಧಿಯಂತೆ ಮಿಂಚುತ್ತಿದೆ. ಇದಕ್ಕೆ ಡಿಸೈನಿಂಗ್ ಬ್ಲೌಸ್ ಇದ್ದರಂತೂ ಅದ್ದೂರಿ ಸಮಾರಂಭದಲ್ಲಿ ಕೇಂದ್ರಬಿಂದು ಕಾಟನ್ ಸಿಲ್ಕ್ ಸೀರೆಯೇ ಆಗಿರುತ್ತದೆ.

'ಕಾಟನ್ ಸೀರೆಗಳು ನೋಡಲು ಸುಂದರ, ಧರಿಸಲು ಆರಾಮದಾಯಕ. ಮದುವೆ ಮುಂಜಿಗಳಂಥ ಶುಭ ಸಮಾರಂಭಗಳಿಗೆ, ಪಾರ್ಟಿ, ರಿಸೆಪ್ಷನ್‌ಗಳಂತಹ ಕಾರ್ಯಕ್ರಮಗಳಿಗೂ ಸೈ ಎನಿಸಿಕೊಳ್ಳುತ್ತವೆ' ಎನ್ನುತ್ತಾರೆ ಕಾಟನ್ ಸಿಲ್ಕ್ ಸೀರೆ ಡಿಸೈನರ್ ಆಗಿರುವ ಬೆಂಗಳೂರಿನ ಬಸವನಗುಡಿಯ ಶಿಲ್ಪಾ ಮೇಲಿನಮನಿ.

'ಇದೀಗ ಕಾಟನ್ ಉಡುಗೆ ದಿನನಿತ್ಯದ ಉಡುಗೆಯಾಗಿದೆ. ಮಾಡೆಲಿಂಗ್ ತಾರೆಯರು, ಸೆಲೆಬ್ರಿಟಿ ಸಿನಿನಟಿಯರಿಂದ ಹಿಡಿದು ಸಾಮಾನ್ಯ ಮಹಿಳೆಯರವರೆಗೂ ಕಾಟನ್ ಸಿಲ್ಕ್ ಸೀರೆ ಟ್ರೆಂಡ್ ಸೃಷ್ಟಿಸಿದೆ. ಇಷ್ಟೇ ಅಲ್ಲದೆ ಕಾಟನ್ ಶರ್ಟ್, ಪೈಜಾಮ, ಪರ್ಸ್, ಬ್ಯಾಗ್, ದುಪಟ್ಟಾ, ಟಾಪ್‌ಗಳೂ ಇಂದು ಬಹುಬೇಡಿಕೆಯ ಉಡುಗೆಯಾಗಿದೆ' ಎನ್ನುತ್ತಾರೆ ಶಿಲ್ಪಾ.

ಸಾಮಾನ್ಯವಾಗಿ ಬೇಸಿಗೆಗೆ ತಿಳಿ ಬಣ್ಣಗಳೇ ಸೂಕ್ತ. ಬಿಳಿ, ತಿಳಿನೀಲಿ, ಆಕಾಶ ನೀಲಿ, ತಿಳಿ ಹಸಿರು, ಕೆನೆ ಬಣ್ಣ... ಹೀಗೆ ಕಣ್ಣಿಗೆ ಹಿತವೆನಿಸುವ ಬಣ್ಣಗಳಲ್ಲಿ ಕಾಟನ್ ಸೀರೆಗಳು ಲಭ್ಯ. ಕಾಟನ್ ಸೀರೆಯನ್ನು ಕೈಮಗ್ಗದಲ್ಲಿ ಮಾಡುವುದರಿಂದ ಒಳ್ಳೆಯ ಲುಕ್ ಅನ್ನೂ ಕೊಟ್ಟು 'ಪರಿಸರಸ್ನೇಹಿ'ಯೂ ಆಗಿದೆ. ಈ ಹತ್ತಿ ಸಾವಯವ ವಸ್ತುವಿನಿಂದ ತಯಾರಾಗುವುದರಿಂದ ದೀರ್ಘಕಾಲ ಬಾಳಿಕೆಯೂ ಬರುತ್ತದೆ,ಈಗಿನ ಹವಾಮಾನಕ್ಕೆ ಸೂಕ್ತವಾದದ್ದೂ ಹೌದು. ಬೇಸಿಗೆಯಲ್ಲಿ ತಂಪಾದ ಅನುಭವ ನೀಡಿದರೆ, ಚಳಿಯಲ್ಲಿ ಬೆಚ್ಚಗೆ ಅನುಭವ ನೀಡಿ ಹಿತವೆನಿಸುತ್ತದೆ.

## ಕಾಟನ್ ಸೀರೆಯ ಮತ್ತಷ್ಟು ವೈವಿಧ್ಯ

ಕಾಟನ್ ಸೀರೆಯಲ್ಲಿ ಪ್ರಾಂತೀಯತೆಗೆ ಅನುಗುಣವಾಗಿ ಮತ್ತಷ್ಟು ವೈವಿಧ್ಯಗಳು ಲಭ್ಯ. ಕೋಲ್ಕತ್ತ, ಬಂಗಾಳ, ಒರಿಸ್ಸಾ ಕಾಟನ್ ಸೀರೆಗಳು ಸಖತ್ ಫೇಮಸ್. ಜೊತೆಗೆ ಬಂಗಾಳದ ತಾಂತ್ ಸೀರೆ ಕಾಟನ್ ಸೀರೆಯ ಮತ್ತೊಂದು ರೂಪ. ಇದನ್ನು ಉಟ್ಟರೆ ತುಂಬಾ ಆಕರ್ಷಕವಾಗಿ ಕಾಣುವುದು. ಜಮದಾನಿ ಸೀರೆಯೂ ಎಂಬ್ರಾಯಿಡರಿ ಮಾಡಿ ಉಟ್ಟರೆ ಫ್ಯಾಷನ್, ಸಂಪ್ರದಾಯ ಎರಡಕ್ಕೂ ಸೈ ಎನಿಸುತ್ತದೆ.

ಒರಿಸ್ಸಾದ ಸಂಬಾಲ್‌ಪುರಿ ಸೀರೆ ಹಲವು ವೈವಿಧ್ಯಗಳಲ್ಲಿ ಸಿಗುತ್ತದೆ. ಬೊಮ್ಕಾಯ್ ಸೀರೆ ಸೊಬಗೇ ಹೆಣ್ಣಿನ ಅಂದವನ್ನು ಹೆಚ್ಚಿಸಲು ಸಹಕಾರಿ. ಕೋಟಾ ಸೀರೆ ರಾಜಸ್ತಾನದ ಮೂಲದ್ದು. ಗ್ರ್ಯಾಂಡ್‌ಲುಕ್ ಕೊಡುವ ಸೀರೆ ಸಮಾರಂಭಗಳಿಗೆ ಸೂಕ್ತ ಎನಿಸಿವೆ.

ಕಾಟನ್ ಸೀರೆ ಹಳೆಯದಾದರೂ ಅದು ಬಳಕೆಗೆ ಬರುತ್ತದೆ. ಚಾಪೆ ಮೇಲೆ ಬೆಡ್‌ಶೀಟ್ ರೀತಿಯಲ್ಲಿ ಬಳಸಬಹುದು. ಇದು ಮೆತ್ತಗೆ ಇದ್ದು ಸೆಕೆ ಎನಿಸುವುದಿಲ್ಲ. ಎಳೆಯ ಮಕ್ಕಳನ್ನು ಮಲಗಿಸಲು ಬಳಸಬಹುದು. ಮಗುವಿಗೆ ಜೋಲಿ ಕಟ್ಟಿ ಮಲಗಿಸಬಹುದು. ಇನ್ನೂ ಹಳೆಯದಾದರೆ ನೆಲ ವರೆಸಲು ಅತ್ಯಂತ ಸೂಕ್ತ ಈ ಕಾಟನ್ ಸೀರೆಗಳು. ಸೀರೆಗಳು ಹರಿದಿದ್ದರೆ ದಿಂಬಿನ ಕವರ್, ಕೌದಿ ತಯಾರಿಸಲು ಸಾಧ್ಯವಾಗುತ್ತದೆ.

ಈಗ ಆನ್‌ಲೈನ್‌ನಲ್ಲೂ ಕಾಟನ್ ಸೀರೆಗಳು ಲಭ್ಯ. ಕಾಟನ್ ಸೀರೆಯ ನಿರ್ವಹಣೆ ಸುಲಭ. ಕಾಟನ್ ಸಿಲ್ಕ್ ಸೀರೆ ಆದರೆ ಡ್ರೈವಾಶ್ ಮಾಡಿಸಬಹುದು. ಮಾಮೂಲಿ ಕಾಟನ್ ಸೀರೆಯನ್ನು ನೀರಿನಲ್ಲಿ ತೊಳೆದು ಸ್ಟಾರ್ಚ್ ಹಾಕಿ ಒಣಗಿಸಿ ಇಸ್ತ್ರಿ ಮಾಡಿಕೊಂಡರೆ ಸಾಕು.